ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.3085/2023

ಪಿ .ಡಬ್ಲ್ಯೂ :1

ಸಾಕ್ಷಿಯನ್ನು ದಿಃ07-04-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ

ನಾನು ಡೆಪ್ಯುಟಿ ತಹಸೀಲ್ದಾರ್ ಸಿ ಎಸ್ ಪುರ ವ್ಯಾಪ್ತಿಯಲ್ಲಿ ಯಾವುದೇ ಕೆಲಸ ನಿರ್ವಹಿಸಿಲ್ಲ . ಸಿ ಎಸ್ ಪುರ ವ್ಯಾಪ್ತಿಯಲ್ಲಿ ಯಾವುದೇ ಹುದ್ದೆಯಲ್ಲಿ ನಾನು ಕೆಲಸ ನಿರ್ವಹಿಸಿಲ್ಲ . ಸಿ ಎಸ್ ಪುರ ಹೋಬಳಿಯಲ್ಲಿ ಅವ್ವೇರಹಳ್ಳಿ ಗ್ರಾಮದ ಬಗ್ಗೆ ಮಾಹಿತಿ ಇರುತ್ತದೆ . ಅವ್ವೇರಹಳ್ಳಿ ಗ್ರಾಮದಲ್ಲಿ ಆಂಜನೇಯ ಸ್ವಾಮಿ , ನರಸಿಂಹ ಸ್ವಾಮಿ ದೇವಸ್ಥಾನವಿದೆ , ಚಂಗಾವಿನಲ್ಲಿ ನರಸಿಂಹಸ್ವಾಮಿ ದೇವಸ್ಥಾನವಿದೆ ಎಂಬ ವಿಚಾರ ತಿಳಿದಿದೆ . ಸದರಿ ದೇವಸ್ಥಾನಗಳು ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಬರುತ್ತವೆ ಎಂದರೆ ಸರಿ .

ಸದರಿ ಎರಡು ದೇವಸ್ಥಾನಗಳಲ್ಲಿ ವೆಂಕಟನರಸಯ್ಯ ಮತ್ತು ವೆಂಕಟರಾಯಪ್ಪ ರವರ ಕುಟುಂಬದವರು ವಾರ್ಷಿಕ ಬದಲಾವಣೆಯ ಮೇರೆಗೆ ದೇವಸ್ಥಾನದ ಆಡಳಿತ ನಿರ್ವಹಿಸುತ್ತಾರೆ ಎಂಬ ವಿಚಾರ ನಿಮಗೆ ತಿಳಿದಿದೆ ಎಂದರೆ ಸಾಕ್ಷಿಯು ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದರು , ಆ ಮೂಲಕ ತಿಳಿದಿದೆ ಎಂದು ತಿಳಿಸಿದ್ದಾರೆ . ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ 1 ನೇ ಆರೋಪಿತರ ವಿರುದ್ಧ ಗೋವಿಂದರಾಜು ಯೋಗ ನರಸಿಂಹಮೂರ್ತಿ, ನರಸಿಂಹಮೂರ್ತಿ, ವೆಂಕಟೇಶ್ , ಅನಂತಲಕ್ಷ್ಮಮ್ಮ ಮತ್ತು ಶಾಂತಮ್ಮ ರವರು ದೇವಸ್ಥಾನದ ಪೂಜಾ ಕಾರ್ಯಗಳ ಜವಾಬ್ದಾರಿ ನಮಗೆ ಬೇಕೆಂದು ಕೋರಿ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ . ಸದರಿ ಪ್ರಕರಣದಲ್ಲಿ ತಹಸೀಲ್ದಾರ್ ರವರನ್ನು ಸಹಾ ಪಕ್ಷಗಾರರನ್ನಾಗಿ ಮಾಡಲಾಗಿತ್ತು ಎಂದರೆ ಸರಿ . ಸದರಿ ನ್ಯಾಯಾಲಯದಲ್ಲಿ ಯಾರ ಕುಟುಂಬದವರು ಪೂಜೆ ಮಾಡಲು ಅರ್ಹರಿದ್ದಾರೋ ಅವರಿಗೆ ವಾರ್ಷಿಕ ಪೂಜೆ ನಿರ್ವಹಿಸಲು ಅವಕಾಶ ನೀಡಬೇಕೆಂದು ಆದೇಶ ಮಾಡಲಾಗಿತ್ತು ಎಂದರೆ ಸರಿ . ಸದರಿ ಆದೇಶ ವಿರುದ್ಧ ಅವರುಗಳು ಬೆಂಗಳೂರಿನ ಮುಜುರಾಯಿ ಕಮೀಷನರ್ ಸಮಕ್ಷಮ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ . ಮುಜುರಾಯಿ ಕಮೀಷನರ್ ರವರು ಜಿಲ್ಲಾಧಿಕಾರಿಗಳ ಆದೇಶಕ್ಕೆ ತಡೆಯಾಜ್ಞೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ . ದಿಃ 18-11-2022 ರಂದು ಜಿಲ್ಲಾಧಿಕಾರಿಗಳು ತಹಸೀಲ್ದಾರ್ ರವರಿಗೆ ಮಾಡಿದ್ದ ಆದೇಶ ಪ್ರಕಾರ ತಹಸೀಲ್ದಾರ್

ರವರು ದಿಃ 11-01-2023 ರಂದು ನನಗೆ ಆದೇಶವೊಂದನ್ನು ನೀಡಿದ್ದರು . 1 ನೇ ಆರೋಪಿತರು ಮತ್ತು ಇತರೆ ಅರ್ಚಕರಿಗೆ ನಾವು ಸ್ಥಳಕ್ಕೆ ಬಂದು ಅಧಿಕಾರ ಹಸ್ತಾಂತರ ಕ್ರಮ ಕೈಗೊಳ್ಳುತ್ತಿದ್ದೇವೆ ಎಂದು ದಿಃ 10-01-2023 ರಂದು ನೋಟಿಸ್ ನೀಡಿದ್ದೇವೆ . ಸದರಿ ನೋಟಿಸ್ ನ್ನು VA ರವರ ಮೂಲಕ ಮುದ್ದಾಂ ಜಾರಿಗೊಳಿಸಲು ನೀಡಿದ್ದೆ . ಯಾವದೇ ನೋಟಿಸ್ ನೀಡಿದ್ದಲ್ಲಿ ವಿಚಾರದ ಜಾರಿಗೆ ನಿಗದಿತ ಸಮಯವನ್ನು ನಮೂದಿಸಲಾಗುತ್ತದೆ , ಅದೇ ರೀತಿ ದಿಃ 10-01-2023 ರಂದು ನೀವು ನೀಡಿರುವ ನೋಟಿಸ್ ನಲ್ಲಿ ನಿಗದಿತ ಸಮಯವನ್ನು ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ದಿಃ 12-01-2023 ರಂದು ಅಧಿಕಾರ ಹಸ್ತಾಂತರಕ್ಕೆ ಬರುತ್ತೇವೆ ಎಂಬುದಾಗಿ ಮಾತ್ರ ತಿಳಿಸಿದ್ದೇನೆ, ಈ ಹಿಂದೆಯೇ ಹಲವು ನೋಟಿಸ್ ನೀಡಿದ್ದೇನೆ ಎಂದು ತಿಳಿಸಿದ್ದಾರೆ . ದಿಃ 10-01-2023 ರ ನೋಟಿಸ್ ನಲ್ಲಿ ತಕರಾರು ಅಥವಾ ಆಕ್ಷೇಪಣೆ ಇದ್ದಲ್ಲಿ ಇಂತಿಷ್ಟು ದಿನದಲ್ಲಿ ಸಲ್ಲಿಸಬೇಕೆಂದು ವಿವರ ಇರುವುದಿಲ್ಲ . ದೇವಸ್ಥಾನಕ್ಕೆ ಬಂಧಿಸಿದ ಎಲ್ಲಾ ದಾಖಲೆಗಳು ಮತ್ತು ವಸ್ತುಗಳನ್ನು ಇಂತಹ ಸ್ಥಳದಲ್ಲಿ ಇಂತಹ ಸಮಯದಲ್ಲಿ ಹಾಜರಿರಬೇಕೆಂದು ನೋಟಿಸ್ ನಲ್ಲಿ ನಮೂದಿಸಿಲ್ಲ . ದಿಃ 11-01-2023 ರಂದು VA ರವರು ನೋಟಿಸ್ ಜಾರಿಗೊಳಿಸಿ ಪ್ರತಿಯನ್ನು ನನಗೆ ಹಿಂತಿರುಗಿಸಿದ್ದಾರೆ . ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜುರುಪಡಿಸಿದ್ದೇನೆ . ದಿಃ 12-01-2023 ರಂದು ಸ್ಥಳಕ್ಕೆ ಬರುತ್ತಿದ್ದೇವೆ , ಅಧಿಕಾರ ಹಸ್ತಾಂತರ ಕ್ರಮ ಕೈಗೊಳ್ಳಬೇಕೆಂದು 1 ನೇ ಆರೋಪಿತರಿಗೆ ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ .

1 ನೇ ಆರೋಪಿತರು ದಿಃ 12-01-2023 ಕ್ಕೆ ಮೊದಲೇ ಅನಾರೋಗ್ಯದ ಕಾರಣ ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ದಾಖಲಾಗಿದ್ದರು ಎಂದರೆ ಸಾಕ್ಷಿಯು ನಾನು ಅಧಿಕಾರ ಹಸ್ತಾಂತರ ಪ್ರಕ್ರಿಯೆಗಾಗಿ ಸ್ಥಳಕ್ಕೆ ಹೋದಾಗ ಅವರ ಮನೆಯವರು ಸದರಿ ವಿಚಾರ ತಿಳಿಸಿದರು ಎಂದು ತಿಳಿಸಿದ್ದಾರೆ . ನಾನು ಸ್ಥಳಕ್ಕೆ ಹೋದ ದಿನ ಅರ್ಚಕರು ಮತ್ತು ದೇವಸ್ಥಾನದ ಕೀಲಿ ಕೈ ಇರದಿದ್ದ ಕಾರಣ ಮಾರನೇ ದಿನ ಸದರಿ ಕ್ರಮ ಕೈಗೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ . ದೇವಸ್ಥಾನದ ಬೀಗ ಒಡೆಯಲು ಆದೇಶವಿತ್ತೇ ಎಂದರೆ ತಹಸೀಲ್ದಾರ್ ರವರು ಮೌಖಿಕ ಆದೇಶ ನೀಡಿದ್ದರು ಎಂದು ತಿಳಿಸಿದ್ದಾರೆ . ಮೌಖಿಕ ಆದೇಶದ ಬಗ್ಗೆ ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ ಎಂದರೆ ಸರಿ . ಜಿಲ್ಲಾಧಿಕಾರಿಗಳು ಮಾಡಿದ್ದ ಆದೇಶದಲ್ಲಿ ದೇವಸ್ಥಾನದ ಬೀಗ ಒಡೆದು ಅಧಿಕಾರ ಹಸ್ತಾಂತರ ಮಾಡುವ ಬಗ್ಗೆ ಯಾವುದೇ ಉಲ್ಲೇಖ ಇಲ್ಲ . ನಾನು ಹೇಳುವಂತೆ ದಿಃ 12-01-2023 ಅಧಿಕಾರ ಹಸ್ತಾಂತರದ ಪ್ರಕ್ರಿಯೆಗಾಗಿ ನಾನು ದೇವಸ್ಥಾನದ ಬಳಿ ಹೋಗಿಲ್ಲ ,

ದೇವಸ್ಥಾನದ ಬೀಗ ಒಡೆದು ಹೊಸ ಬೀಗ ಕೊಡಿಸುವ ಪ್ರಕ್ರಿಯೆಯನ್ನು ಮಾಡಿಲ್ಲ . ಸ್ಥಳದಲ್ಲಿ ಒಡೆದು ಹಾಕಿದ್ದ ಹಳೆಯ ಬೀಗ ವನ್ನು ನಾಶಪಡಿಸಿದ್ದೇನೆ , ತಹಸೀಲ್ದಾರ್ ರವರಿಗೆ ಹಸ್ತಾಂತರಿಸಿಲ್ಲ . ದೇವಸ್ಥಾನದ ಪೂಜಾ ಸಾಮಗ್ರಿಗಳ ಪಟ್ಟಿಯನ್ನು ತಯಾರಿಸಿಲ್ಲ , ಮಹಜರು ಕ್ರಮ ಕೈಗೊಂಡಿಲ್ಲ , ಸ್ಥಳದಲ್ಲಿ ಯಾರ ಸಹಿಯನ್ನು ಯಾವ ದಾಖಲೆಗಳಿಗೆ ಪಡೆದಿಲ್ಲ ಎಂದರೆ ಸರಿಯಲ್ಲ . ನಾನು ಆದೇಶದ ಪ್ರಕಾರ ಕಾನೂನುಬದ್ಧ ಕ್ರಮ ಕೈಗೊಳ್ಳದೇ ತಹಸೀಲ್ದಾರ್ ರವರು ಮೇಲಾಧಿಕಾರಿಯಾಗಿರುವ ಕಾರಣ ಅವರ ಮಾತು ಕೇಳಿ ಆರೋಪಿತರುಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ವಿವರಗಳ ಪ್ರಕರಣ ದಾಖಿಸಿದ್ದೇನೆ ಎಂದರೆ ಸರಿಯಲ್ಲ .

ದಿಃ 12-01-2023 ರಂದು ಯೋಗನರಸಿಂಹ ಎಂಬ ಅರ್ಚಕರಿಗೆ ಅಧಿಕಾರ ಹಸ್ತಾಂತರ ಮಾಡಲಾಗಿದೆ . ಅಧಿಕಾರ ಹಸ್ತಾಂತರ ಮಾಡಿದ ಸಂಬಂಧ ಪ್ರತ್ಯೇಕ ದಾಖಲೆ ತಯಾರಿಸಿ ಯೋಗನರಸಿಂಹ ರವರ ಸಹಿ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಮಹಜರಿನಲ್ಲಿ ಸಹಿ ಪಡೆದಿದ್ದೇನೆ ಎಂದು ತಿಳಿಸಿದ್ದಾರೆ . ಅಧಿಕಾರ ಹಸ್ತಾಂತರ ಪ್ರಕ್ರಿಯೆಯ ಸಂಬಂಧ ತಹಸೀಲ್ದಾರ್ ರವರಿಗೆ ಸಲ್ಲಿಸಿದ ವರದಿಯ ಪ್ರಕ್ರಿಯೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ .

1 ನೇ ಆರೋಪಿತರು ಮತ್ತು ಅವರ ಮಗ ಅಚ್ಯುತ್ ರವರು ಅಧಿಕಾರ ಹಸ್ತಾಂತರ ಪ್ರಕ್ರಿಯೆಯ ಸಂಬಂಧ ತಹಸೀಲ್ದಾರ್ ರವರಿಗೆ ಸಲ್ಲಿಸಿದ ವರದಿ ಮತ್ತು ಸಂಬಂಧಿಸಿದ ಇತರೇ ದಾಖಲೆಗಳ ಪ್ರತಿಗಳನ್ನು ನೀಡಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ಅರ್ಜಿ ಸಲ್ಲಿಸಿದ್ದ ವಿಚಾರ ಗೊತ್ತಿಲ್ಲ , ತಹಸೀಲ್ದಾರ್ ರವರಿಗೆ ಆ ಬಗ್ಗೆ ವಿಚಾರ ತಿಳಿಸಿದ್ದೇನೆ ಎಂದು ಹೇಳಿದ್ದಾರೆ . ದಾಖಲೆಗಳ ಪ್ರತಿ ಕೋರಿ ನಿಮ್ಮ ಇಲಾಖೆಗೆ ಅರ್ಜಿ ಸಲ್ಲಿಸಿದರೆ ಎಷ್ಟು ದಿನಗಳಲ್ಲಿ ಪ್ರತಿ ನೀಡುತ್ತೀರಿ ಎಂದರೆ ಸಾಕ್ಷಿಯು ದಾಖಲೆಗಳು ಲಭ್ಯವಿದ್ದಲ್ಲಿ ತಕ್ಷಣವೇ ನೀಡುತ್ತೇವೆ ಇಲ್ಲದಿದ್ದರೇ ಸರ್ಕಾರಿ ನಿಯಮಗಳ ಪ್ರಕಾರ 7 ದಿನಗಳ ಅವಧಿ ನೀಡುತ್ತೇವೆ ಎಂದು ತಿಳಿಸಿದ್ದಾರೆ . 7 ದಿನಗಳು ಕಳೆದ ನಂತರ 1 ನೇ ಆರೋಪಿತರು ಮತ್ತು ಅವರ ಮಗ ಅಚ್ಯುತ್ ರವರು ಮತ್ತೊಮ್ಮೆ ಅರ್ಜಿಯನ್ನು ಸಲ್ಲಿಸಿ ಮುಜರಾಯಿ ಆಯುಕ್ತರ ಸಮಕ್ಷಮ ಇರುವ ಪ್ರಕರಣಗಳಲ್ಲಿ ದಾಖಲೆಗಳನ್ನು ಸಲ್ಲಿಸಬೇಕು ಪ್ರತಿಗಳನ್ನು ನೀಡಿ ಎಂದು ಕೋರಿದ್ದರು ಎಂದರೆ ನನಗೆ ಗೊತ್ತಿಲ್ಲ . ಅವರು ನಮ್ಮ ಕಚೇರಿಗೆ ಬಂದಾಗ ನಾವು ಬೆಳಗ್ಗೆ 11.00 ರಿಂದ 2.00 ಗಂಟೆಯವರೆಗೆ ಕಾಯಿಸಿ ಮತ್ತು 4.00 ಗಂಟೆಗೆ ಬರಬೇಕೆಂದು ತಿಳಿಸಿ ಸತಾಯಿಸಿದ್ದೇವೆ ಆದರೂ ಸಹಾ ದಾಖಲೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ . ಆರೋಪಿತರಗಳು ದಿಃ 13-01-2023 ರಂದು

ಮಧ್ಯಾಹ್ನ 3.30 ರ ಸಮಯದಲ್ಲಿ ನಮ್ಮ ಕಚೇರಿಗೆ ಬಂದು ನಮ್ಮ ಜೊತೆ ಏರು ಧ್ವನಿಯಲ್ಲಿ ಮಾತನಾಡಿ ದಮಕಿ ಹಾಕಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ . ಆರೋಪಿತರುಗಳು ಮಹಜರಿನ ಪ್ರತಿ ನೀಡಬೇಕೆಂದು ನಮ್ರವಾಗಿ ವಿನಂತಿಸಿದರೂ ಸಹಾ ಅವರಿಗೆ ದಾಖಲೆ ನೀಡದೇ ಸತಾಯಿಸಿದ್ದೇವೆ ಎಂದರೆ ಸರಿಯಲ್ಲ .

ದಿಃ 20-01-2023 ರಂದು ಠಾಣೆಗೆ ದೂರು ನೀಡಿದ್ದೇನೆ . ದಿಃ 13-01-2023 ರಿಂದ 20-01-2023 ರವರೆಗೆ ಏಕೆ ದೂರು ನೀಡಿಲ್ಲ ಎಂದರೆ ಸಾಕ್ಷಿಯು ನನ್ನ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ ಅನುಮತಿ ಪಡೆದು ದೂರು ನೀಡಿದ್ದೇನೆ ಎಂದು ತಿಳಿಸಿದ್ದಾರೆ . ಸದರಿ ವಿಚಾರವನ್ನು ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿ .ನಾನು ಹೇಳುವಂತೆ ದಿಃ 13-01-2023 ರಂದು ಆರೋಪಿತರುಗಳು ನಮ್ಮ ಕಚೇರಿಯಲ್ಲಿ ಕೂಗಾಡಿ ಗಲಾಟೆ ಮಾಡಿದ್ದಲ್ಲಿ ಅದೇ ದಿನ ದೂರು ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಡೆಪ್ಯುಟಿ ತಹಸೀಲ್ದಾರ್ ಆಗಿರುವ ಕಾರಣ ಪ್ರತ್ಯೇಕ ಚೇಂಬರ್ ನೀಡಲಾಗಿದೆ ಎಂದರೆ ಸರಿ . ನನ್ನ ಚೇಂಬರ್ ಗೆ ಬರುವ ಮೊದಲು ಯಾವುದೇ ವ್ಯಕ್ತಿಯು ನಮ್ಮ ಡಿ ದರ್ಜೆಯ ನೌಕರರ ಮೂಲಕ ಮಾಹಿತಿ ಪಡೆದು ನನ್ನ ಅನುಮತಿ ಪಡೆಯಬೇಕೆಂದರೆ ಸರಿಯಲ್ಲ . ನಮ್ಮ ಕಚೇರಿಯಲ್ಲಿ ಪ್ರತಿ ನಿತ್ಯವೂ ಜನ ಜಂಗುಳಿ ಇರುತ್ತದೆ ಎಂದರೆ ಸರಿ . ನಾನು ಹೇಳುವಂತೆ ಆರೋಪಿತರುಗಳು ನಮ್ಮ ಕಚೇರಿಯಲ್ಲಿ ಕೂಗಾಡಿ ಗಲಾಟೆ ಮಾಡಿಲ್ಲ ಮತ್ತು ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ . ದೂರಿನಲ್ಲಿ ತಹಸೀಲ್ದಾರ್ ರವರಿಗೆ ಹಲವರು ಮೂಲಕ ಬೆದರಿಕೆ ಕರೆಗಳನ್ನು ಮಾಡಿಸುತ್ತಿದ್ದಾರೆ ಎಂಬುದಾಗಿ ನಮೂದಿಸಿದ್ದೀರಿ ಸದರಿ ವಿಚಾರವನ್ನು ತಹಸೀಲ್ದಾರ್ ರವರು ನಿಮಗೆ ಯಾವಾಗ ತಿಳಿಸಿದರು ಎಂದರೆ ಸಾಕ್ಷಿಯು ದಿಃ 13-01-2023 ರಂದು ತಿಳಿಸಿದ್ದರು , ಆ ಪ್ರಕಾರ ಮುಂದುವರೆದ ಹೇಳಿಕೆ ನೀಡಿದ್ದೇನೆ ಎಂದು ತಿಳಿಸಿದ್ದಾರೆ . ಆ ರೀತಿ ಬೆದರಿಕೆ ಕರೆಗಳು ಬಂದಿದ್ದಲ್ಲಿ ತಹಸೀಲ್ದಾರ್ ರವರಿಗೆ ಠಾಣೆಯಲ್ಲಿ ದೂರು ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ . ಯಾವ ಸಂಖ್ಯೆಯಿಂದ ಸದರಿ ಕರೆಗಳು ಬಂದಿದ್ದವು ಎಂಬ ಬಗ್ಗೆ ತಹಸೀಲ್ದಾರ್ ರವರು ನನಗೆ ಮಾಹಿತಿ ನೀಡಿಲ್ಲ . ದೇವಸ್ಥಾನದ ಪೂಜಾ ಕಾರ್ಯದ ವಾರ್ಷಿಕ ಬದಲಾವಣೆಯ ಸಂಬಂಧ ತಮಗೆ ಪೂಜಾ ಕಾರ್ಯದ ಹೊಣೆಗಾರಿಕೆ ನೀಡಬೇಕೆಂದು ಕೋರಿ 1 ನೇ ಆರೋಪಿತರು ತಹಸೀಲ್ದಾರ್ ರವರಿಗೆ ಹಲವು ಅರ್ಜಿಗಳನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ .

2 ನೇ ಆರೋಪಿತರು ಪ್ರತಿ ವರ್ಷ ಗ್ರಾಮದಲ್ಲಿ ದೇವಸ್ಥಾನದ ಮುಂದೆ ಕದಲಿ ಪೂಜೆ

ಮಾಡಿಸುತ್ತಾರೆ , ಆ ಸಂಬಂಧ ನಮ್ಮ ಅನುಮತಿ ಪಡೆಯುತ್ತಾರೆ ಎಂದರೆ ಸರಿ . ಹಿಂದಿನಿಂದಲೂ 2 ನೇ ಆರೋಪಿತರ ಕುಟುಂಬದವರೇ ಸದರಿ ಕದಲಿ ಪೂಜೆ ಮಾಡಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ನಾನು ಗುಬ್ಬಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಮಯದಿಂದಲೂ ಸದರಿ ಪೂಜೆ ಮಾಡಿಸಲು ಅನುಮತಿ ಕೋರಿ 2 ನೇ ಆರೋಪಿತರು ಅರ್ಜಿ ಸಲ್ಲಿಸುತ್ತಿದ್ದಾರೆ ಎಂದರೆ ಸಾಕ್ಷಿಯು ಅರ್ಜಿ ಬರುತ್ತಿರುವುದು ನಿಜ ಆದರೆ ಯಾರು ಸಲ್ಲಿಸುತ್ತಿದ್ದಾರೆ ಎಂಬ ಬಗ್ಗೆ ದಾಖಲೆ ಪರಿಶೀಲಿಸಿ ಹೇಳಬಹುದು ಎಂದು ತಿಳಿಸಿದ್ದಾರೆ . ಆರೋಪಿತರುಗಳು ಕಚೇರಿಗೆ ಬಂದು ಗಲಾಟೆ ಮಾಡಿದ್ದು ನಮ್ಮ ಇತರೇ ಸಿಬ್ಬಂದಿಗಳು ಅವರನ್ನು ಸಮಾಧಾನ ಪಡಿಸಿದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ . 1 ನೇ ಆರೋಪಿತರು ಮತ್ತು ಅವರ ಮಗ ದಾಖಲೆಗಳ ಪ್ರತಿಗಳನ್ನು ಕೋರಿ ಅರ್ಜಿ ಸಲ್ಲಿಸಿದ್ದರು ಸಹಾ ಅವರಿಗೆ ದಾಖಲೆಗಳನ್ನು ನೀಡದೇ ಕರ್ತವ್ಯ ಲೋಪ ಎಸೆಗಿದ್ದೇನೆ ಎಂದರೆ ಸರಿಯಲ್ಲ , ದಾಖಲೆಗಳನ್ನು ನೀಡಿದ್ದೇನೆ ಎಂದು ತಿಳಿಸಿದ್ದಾರೆ . ನಮ್ಮ ಕರ್ತವ್ಯ ಲೋಪವನ್ನು ಮರೆಮಾಚುವ ಸಲುವಾಗಿ ಆರೋಪಿತರುಗಳ ವಿರುದ್ಧ ಈ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ . ನಾನು ಹೇಳುವಂತೆ ಸ್ಥಳದಲ್ಲಿ ಯಾವುದೇ ಮಹಜರು ಕ್ರಮ ಕೈಗೊಂಡಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮಹಜರನ್ನು ಬರೆದ ಅಧಿಕಾರಿಯ ಹೆಸರು ಗೊತ್ತಿಲ್ಲ ಪೊಲೀಸರು ಬರೆದಿದ್ದಾರೆ . ಆ ದಿನ ಎರಡು ಮಹಜರುಗಳನ್ನು ಬರೆಯಲಾಗಿದೆ, ನಾನು ಎರಡು ಸಹಿಗಳನ್ನು ಮಾಡಿದ್ದೇನೆ. ನಾನು ಹೇಳುವಂತೆ ಮಹಜರು ಸಮಯ ಪೊಲೀಸರು ಯಾವುದೇ CCTV ಫೂಟೇಜ್ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ . ದೇವಸ್ಥಾನದ ಪೂಜಾ ಕಾರ್ಯದ ಸಂಬಂಧ ಮುಜುರಾಯಿ ಆಯುಕ್ತರ ಸಮಕ್ಷಮ ಪ್ರಕರಣ ಚಾಲ್ತಿಯಲ್ಲಿರುವ ವಿಚಾರ ತಿಳಿದಿದ್ದರೂ ಸಹಾ ತಹಸೀಲ್ದಾರ್ ರವರು ಆರೋಪಿತರುಗಳ ವಿರುದ್ಧ ಅವರಿಗೆ ತೊಂದರೆ ನೀಡುವ ಸಲುವಾಗಿ ನನ್ನ ವಿರುದ್ಧ ಈ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ . ದೇವಸ್ಥಾನದ ಪೂಜಾ ಕಾರ್ಯದ ಸಂಬಂಧ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ . ಸದರಿ ವಿಚಾರ ತಿಳಿದಿದ್ದರೂ ಸಹಾ 1 ನೇ ಆರೋಪಿತರಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡದೇ ತೊಂದರೆ ನೀಡಿ ಈ ಪ್ರಕರಣ ದಾಖಲಿಸಿ ಈಗ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

1 ನೇ ಆರೋಪಿತರ ಪತ್ನಿ ನನ್ನ ಮತ್ತು ಇತರೇ ಸಾಕ್ಷಿದಾರರುಗಳ ವಿರುದ್ಧ ಸಿ ಎಸ್ ಪುರ ಠಾಣೆಯಲ್ಲಿ ದೂರೊಂದನ್ನು ನೀಡಿದ್ದರು ಎಂದರೆ ಸರಿ. ನಾನು ನನ್ನ

ಪ್ರಭಾವವನ್ನು ಬಳಸಿ ಬಿ ಅಂತಿಮ ವರದಿ ಸಲ್ಲಿಸುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ . ನಮ್ಮ ವಿರುದ್ದ ಆಕೆ ಇದೇ ನ್ಯಾಯಾಲಯದಲ್ಲಿ ಖಾಸಗಿ ಪಿರ್ಯಾದು ದಾಖಲಿಸಿದ್ದಾರೆ ಎಂದರೆ ಸರಿ . ಅದು ಇನ್ನೂ ಚಾಲ್ತಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ . ಅದೇ ಕಾರಣಕ್ಕಾಗಿ ವೈಮನಸ್ಸಿನಿಂದ ಆರೋಪಿತರುಗಳ ವಿರುದ್ದ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.